Doc-118
T.P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂವತ್ಸರ 29 ಸಂಚಿಕೆ 178] ಮಂಗಳವಾರ 2–4–46 [ಬಿಡಿ ಪ್ರತಿ 3 ಪೈ

ಯುದ್ಧಾನಂತರ

'ಗೊಂಗಡಿಯಲ್ಲಿ ತಿನ್ನುತ್ತಾ, ಜೊಚ್ಚು ಲೆಕ್ಕುವನ್ನು ಇಟ್ಟುಕೊಂಡಂತಿದೆ' ಯುದ್ಧಾನಂತರದ ಪ್ರಪಂಚದ ಸ್ಥಿತಿ ಸಾಪಕ್ಷೇತಿಯಿಲ್ಲದೆ, ಬಲವುಳ್ಳವನದೇ ರಾಜ್ಯವೆಂಬ ಸೂತ್ರದ ಮೇಲೆ ಇದುವರೆಗೂ ಪ್ರಪಂಚವು ಅಧಾರಪಟ್ಟಿದ್ದಿತು. ಈ ಪರಿಸ್ಥಿತಿಗೆ ಭಂಗಬರುವುದಿಲ್ಲ. ಪರ್ಷಿಯಾದಿಂದ ತನ್ನ ಸೈನ್ಯಗಳನ್ನು ಹಿಂದಕ್ಕೆ ತರಿಸುವುದಕ್ಕೆ ಬದಲು ರಷ್ಯಾ ಇನ್ನೂ ಹೊಸ ಸೈನ್ಯಗಳನ್ನು ಕಳುಹಿಸುತ್ತಿದ್ದು ಈಚೆಗೆ ವಿಧಿಯಿಲ್ಲದೆ ಹಿಂದಕ್ಕೆ ತರಿಸಿಕೊಳ್ಳಲು ಪ್ರಾರಂಭಿಸಿದೆ. ತುರ್ಕಿ ವಿಷಯದಲ್ಲಿ ಕೂಡ ರಷ್ಯಾ ಲಡಾಯಿಗೆ ಸಿದ್ಧವಾಗಿರುವಂತಿದೆ. ಪರ್ಷಿಯಾಕ್ಕೆ ಅಮೇರಿಕಾವೂ. ತುರ್ಕಿಗೆ ಬ್ರಿಟನ್ನೂ ಅಭಯ ಹಸ್ತವನ್ನಿತ್ತಿರುವುವು.

ಅಟಂಬಾಂಬು ರಹಸ್ಯವನ್ನು ಅಂತಃಪುರದಲ್ಲಿ ಬಚ್ಚಿಟ್ಟಿರುವತೆ ಅಮೇರಿಕಾ ಬ್ರಿಟನ್ನುಗಳು ಅಂದುಕೊಳ್ಳುವ ಸಮಯಕ್ಕೆ, ಅದು ಆಕಾಶ ಮಾರ್ಗದಲ್ಲಿ ರಷ್ಯವನ್ನು ತಲಪಿತು. ಅದರಿಂದ ಈಗ ಎಲ್ಲರೂ ಆ ವಿಷಯದಲ್ಲಿ ಸಮಸ್ಥಿತಿಯಲ್ಲೇ ಇದ್ದಾರೆ. ಇನ್ನು ಕೆಲವು ವಿಷಯಗಳಲ್ಲಿ ರಷ್ಯಾದ್ದೇ ಮೇಲು ಕೈ ಆಗಿರುವಂತೆ ಕಾಣುತ್ತದೆ. ಕಾಸ್ಮಿಕ್ ಕಿರಣಗಳೆಂಬ ಒಂದು ಹೊಸ ಬಗೆಯ ಶಕ್ತಿ— ಇದೇ ಪರಮಾಣು ಸೃಷ್ಟಿಗೆ ಮುಖ್ಯವಾದದ್ದು— ಈ ಶಕ್ತಿಯ ರಹಸ್ಯವನ್ನು ಕೂಡ ರಷ್ಯನರು ಅರಿತುಕೊಂಡಿರುವಂತೆ ವರ್ತಮಾನಗಳು ಬರುತ್ತಿವೆ. ಅದರಿಂದ ಇಂಥಾ ರಾಕ್ಷಸ ಕೈಲಿ ಪ್ರಪಂಚವೆಂಬ ಶಿಶುವು ಜೀವಿಸಿಕೊಂಡಿರುತ್ತದೆನ್ನುವುದಕ್ಕೆ ಸರಿಯಾದ ಆಧಾರ ವ್ಯಾವುದೂ ಕಾಣಬರುವುದಿಲ್ಲ.

ಇಂಡೋನೇಷಿಯಾದಲ್ಲಿ ರಾಯಭಾರಗಳು ಚರುಕಾಗಿಯೇ ನಡೆಯುತ್ತಿವೆ. ಅದರೆ ಬೇರೊಂದು ಕಡೆಯಿಂದ ಬ್ರಿಟಿಷರು ಡಚ್ ಸೇನೆಗಳನ್ನು ತಂದು ಇಳಿಸುತ್ತಿರುವುದನ್ನು ನೋಡಿದರೆ ಇದರಲ್ಲಿ ಯಾವುದೋ ಹೀನ ಮೋಸ ಇರುವುದೇನೋ ಎಂಬ ಭಯವು ಉತ್ಪನ್ನವಾಗುತ್ತದೆ. ಕಾಲವು ಕಳೆದಂತೆಲ್ಲಾ ಎಲ್ಲಾ ವಿಷಯಗಳೂ ಹೊರಬೀಳುತ್ತಿವೆ, ಮಹಾಭಾರತದಲ್ಲಿ ಹೇಳಿರುವಂತೆ ಮುಂದೆಬರುವ ಕಾಲಕ್ಕಿಂತ ಹಿಂದೆ ಕಳೆದ ಕಾಲವೇ ಉತ್ತಮವಾಗಿರುವಂತೆ ಕಾಣಬರುತ್ತದೆ. (ಓಂ)

ಡೆಲ್ಲಿ-ಗಾಂಧೀಜೀ ವಿರುದ್ಧ ಪ್ರದರ್ಶನ

ಹೋಟೆಲ್ ಮಾಲೀಕ ಸಂಘ

ಮೈಸೂರು, ಏ 1 — ನಿನ್ನೆಯ ದಿವಸ ಹೋಟೆಲ್ ಮಾಲೀಕ ಸಂಘದ ಸಭೆ ಸೇರಿದ್ದಿತು.

ಸರ್ಕಾರದ ಆಜ್ಞೆಗೆ ವಿಧೇಯರಾಗಿ ನಡೆದುಕೊಂಡು, ಆಹಾರ ಪರಿಸ್ಥಿತಿಗೆ ತಕ್ಕಂತೆ ನಡೆಯಬೇಕೆಂಬ ಠರಾವನ್ನು ಸರ್ವರೂ ಅಂಗೀಕರಿಸಿರುವುದಾಗಿ ತಿಳಿಯಬಂದಿದೆ.

ಹತ್ತು ವರ್ಷಗಳನಂತರ ನಿನ್ನೆಯ ದಿವಸ ನಡೆದ ಗ್ರಿಸಿನ ಜನಾವಣೆ ಶಾಂತರೀತಿಯಿಂದ ನಡೆದು, ರಾಜ್ಯತ್ವ ಪಕ್ಷಕ್ಕೆ ಬಹುಬಲ ದೊರೆತಿರುವುದಂತೆ.

ಕಾಂಗ್ರೆಸ್ ವತ್ತು ಲೀಗಿನ ಏಕಮತ್ಯಕ್ಕೆ ಭೂಪಾಲ್ ನವಾಬರು ಪ್ರಯತ್ನಿಸುತ್ತಿದ್ದಾರೆ

ಭಾರತ ದೇಶಕ್ಕೆ ಆಗಮಿಸಿರುವ ಸಚಿವ ನಿಯೋಗದ ಬಗ್ಗೆ ಮದಿ ನೂಡಲು ಅಮೇರಿಕಾ ರಷ್ಯಾ ಚೀನಾ ಮತ್ತು ಡಗಸ್ಲೋವಿಯಾ ಮುಂತಾದೆಡೆಗಳಿಂದ ಒಟ್ಟು ಮುನ್ನೂರು ಮಂದಿ ಪತ್ರಿಕೋದ್ಯೋಗಿಗಳು ಆಗಮಿಸಿರುವರು.

ಬೆಂಗಳೂರು ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಬಗ್ಗೆ 15 ಮಂದಿ ಸ್ವತಂತ್ರ ಸದಸ್ಯರು ಮಂಡಿಸಿರುವ ಅವಿಶ್ವಾಸ ನಿರ್ಣಯ ಇದೇ ತಾ || 12 ರಲ್ಲಿ ಚರ್ಚೆಗೆ ಬರಲಿದೆ.

ವಿರೋಧಾಭಿಪ್ರಾಯವನ್ನು ಸೂಚಿಸಲು ಕಾತಿಯಲ್ಲಿ ನೆರೆದಿದ್ದ ಸಭೆಯನ್ನು ಒಬ್ಬ ಸರ್ ಬಿಟ್ಟು ಚದುರಿಸಿದ.

ಸೂಚನೆ

ಉಗಾದಿ ಹಬ್ಬದ ಪ್ರಯುಕ್ತ ನಾಳೆಯ ದಿವಸ 'ಸತ್ಯವಾದಿ' ಯು ಪ್ರಕಟಿಸಲ್ಪಡುವುದಿಲ್ಲ. — ಮ್ಯಾನೇಜರ್

ಬೊಂಬಾಯಿ, ಏ 1 — ಬೊಂಬಾಯಿ ವಿಧಾನಸಭೆಯ ಮಂತ್ರಿ ಮಂಡಲವನ್ನು ಸ್ಥಾಪಿಸಲು ಕಾಂಗ್ರೆಸ್ ಮುಖಂಡ ಶ್ರೀ ಬಿ. ಜಿ ಖೇರರಿಗೆ ಗೌರ್ನರರು ಹೇಳಿರುತ್ತಾರೆ.

ಸೆಂದ ಸೀಟಿ, — ಕಳೆದ ವಾರವೇ ಸೈದಾಪೇಟೆ ಭಾಗದ ರೇಷನ್ ಕಾರ್ಡಗಳಿಗೆ ನಾಯಿದೆ ಮುಗಿದರೂ ಹೊಸ ಕಾರ್ಡಗಳು ಜನರಿಗೆ ಕೂಪನ್ಪಲಿಲ್ಲವಾಗಿ 150 ಜನರಿಗೆ ಕಳೆದ ಭಾನುವಾರ ಅಕ್ಕಿ ರೇಷನ್ ದೊರೆಯಲಿಲ್ಲ. ಅರ್ಧ ದಿನವೆಲ್ಲಾ ಡಿಪೋ ಮುಂದೆ ಕಾದಿದ್ದು ನಿರಾಶರಾಗಿ ಮನೆಗೆ ತೆರಳಿದರು.

ಪಂಜಾಬು, ಮಾ 31 — ಪಂಜಾಬು ಸರ್ಕಾರವು ತಕ್ಸೀರುಗಳನ್ನು ಪತ್ತೆ ಮಾಡಲು ಪೋಲೀಸು ನಾಯಿಗಳನ್ನು ತರಬೇತು ಮಾಡುವವರಾಗಿದ್ದಾರೆ.

ನವದೆಹಲಿ, ಏ 1 — ಗಾಂಧೀಜೀ ಮೋಟಾರಿನಲ್ಲಿ ಹಾಜನ ಕ್ಷೇತ್ರದಲ್ಲಿನ ತಮ್ಮ ಕೊತಡಿಗೆ ಬಂದೊಡನೆ 50 ಮಂದಿ ಕಪ್ಪು ಬಾವುಟ ಪ್ರದರ್ಶಿಸುತ್ತಾ ಎರುದ್ಧ ಘೋಷಣೆ ಕೂಗುತ್ತಾ ಗಾಂಧೀಜಿ ಕೊಠಡಿಗೆ ಕಲ್ಲುಗಳನ್ನು ಎಸೆದರು. ಸ್ವಯಂ ಸೇವಕರು ಇವರನ್ನು ಅಟ್ಟಿದರು.

ಕಟಕ್, ಮಾ 29— ದಕ್ಷಿಣ ಪೂರ್ವ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರನಿಗೆ ಪ್ರತಿಸ್ಪರ್ಧಿಯಾಗಿ ನಿಂತಿದ್ದ ಶ್ರೀ ಕುಲಾಪಾಣಿ ಎಂಬವನ ಕಿವಿಯನ್ನು ಒಬ್ಬನು ಕೊಯ್ದು ಪೋಲೀಸರಿಗೆ ಶರಣಾಗತನಾದನು.

ಮದ್ರಾಸು ಮಾ 31 — ಭಾರತವನ್ನು ನಿಮ್ಮ ದೇಶವನ್ನಾಗಿ ಕಾಣಿ, ಎಂದು ಡಾ || ಸ್ಯಾಮ್ಯುಯೆಲ್ ಜೋನ್ಸರು ಕ್ರಿಶ್ಚಿಯನ್ನರಿಗೆ ವಿಜ್ಞಾಪಿಸಿಕೊಂಡಿದ್ದಾರೆ.

ಮೃತ್ಯುಂತ ಸಂಗ್ರಹ

ಸಿಕ್ ಸ್ಥಾನವನ್ನು ಸ್ಥಾಪಿಸಬೇಕೆಂದು ಅಕಾಲಿ ಸಿಕ್ ದಳದ ಆಡಳಿತ ಸಮಿತಿ ನಿರ್ಣಯಿಸಿತು

ಭಾರತದಲ್ಲಿ ಸಕ್ಕರೆ ಮುಗ್ಗಟ್ಟಾಗುವಂತಿದೆ. ಮೂರು ಲಕ್ಷ ಟನ್ ಸಕ್ಕರೆ ಕೊಡಬೇಕೆಂದು ಭಾರತ ಸರ್ಕಾರದವರು ಬ್ರಿಟಿಷ್ ಸಾರ್ವಭೌಮ ಸರ್ಕಾರದವರನ್ನು ಕೇಳಿದ್ದಾರೆ.

ಮೈಸೂರು, ಏ 2 — ಇದೇ ಮಾಹೆ ತಾರೀಖು 4–5 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ 68 ನೆಯ ಉಪನ್ಯಾಸ ಮಾಲೆಯ ಉಪನ್ಯಾಸಗಳು ಸಾಗರದ ಪುರಸಭೆಯ ಆಶ್ರಯದಲ್ಲಿ ಸಾಗರದ ಪುರಭವನದಲ್ಲಿ ಜರಗುವುದು

ವಾಷಿಂಗ್ಟನ್— ಪ್ರಪಂಚದಲ್ಲಿ ಹರಡುತ್ತಿರುವ ಕ್ಷಾಮವನ್ನು ಎದುರಿಸುವುದಕ್ಕಾಗಿ ಅಮೇರಿಕಾದಲ್ಲಿಯೂ ಜೀವ ಜಂತುಗಳಿಗೆ ಧಾನ್ಯ ಕೂಡುವುದು ಕಡಮೆ ಮಾಡಲಾಗಿದೆ.

ಕೊಲ್ಲಾಪುರದಲ್ಲಿನ ಕೇಂದ್ರ ಬಂಧೀಖಾನೆಯಲ್ಲಿ ರೇಷನ್ ಖೋತಾಮಾಡಿದ್ದಕ್ಕಾಗಿ ಖೈದಿಗಳು ಅನ್ನ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ.

ವಾಷಿಂಗ್ಟನ್ ಮಾ 28— ಸಂ || ಅಮೇರಿಕಾದ ಮಾಜಿ ಅಧ್ಯಕ್ಷರಾದ ಹರ್ಬರ್ಟ್ ಹೂವರರು ಪ್ರಪಂಚ ಆಹಾರ ಅವಶ್ಯಕತೆಯ ಸಂಬಂಧದ ತಮ್ಮ ವಿದೇಶ ಸಂಚಾರದಲ್ಲಿ ಭಾರತವನ್ನೂ ಸೇರಿಸಿಕೊಂಡಿರುವರು.

ವಾಷಿಂಗ್ಟನ್ ಮಾ 27— ಅಮೇರಿಕಾವು 1939 ನೇ ಸೆಪ್ಟಂಬರಿನಿಂದ 1945 ನೇ ಡಿಸೆಂಬರ್ 31 ರವರೆಗೆ, ಯುದ್ಧದ ತೊಂದರೆಗೀಡಾದ ದೇಶಗಳ ಕಷ್ಟನಿವಾರಣೆಗಾಗಿ 500 ಮಿಲಿಯ ಡಾಲರಿಗೆ ಕಡಮೆಯಿಲ್ಲದಂತೆ ಸಹಾಯ ಮಾಡಿರುವುದಾಗಿ ಹೇಳಲಾಗಿದೆ.

ಕೊಲಂಬೋ ಮಾ 30— ಅಟಂಬಾಂಬು ತಯಾರಿಗೆ ಉಪಯೋಗವಾದ ಥೋರಿಯಂ ಲೋಹವು ಸಿಲೋನಿನಲ್ಲೂ ಇರುವುದಾಗಿ ತಿಳಿಯಬಂದಿದೆ.

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 66-12-0
ಚಿನ್ನ ತೊಲ 1 ಕ್ಕೆ	99-0-0
ಬೆಳ್ಳಿ	1-10-3

ಗ್ರಾಮ ಉದ್ಯೋಗಸ್ಥರ ರಾಜೀನಾಮೆ

ಮಂಗಳೂರು, ತಾ 30 — ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರಾದ ಶ್ರೀ ಭೂತರಾಜರವರು ಇದೇ ತಾರೀಖು 29 ರಿಲ್ಲು ಕೋಟೆಕಾರಿನ ಮೊಕ್ಕಾವಿಗೆ ಬಂದವರು, ಆಲಿದ್ದ ಗ್ರಾಮೋದ್ಯೋಗಸ್ಥರನ್ನು ಅನಾವಶ್ಯಕವಾಡಿ ಜೈದು ಅವನಾನ ಪಡಿಸಿದರೆಂದೂ ಅದರ ನಿಷೇದಾರ್ಥವಾಗಿ ಆಸುಪಾಸಿನ ಗ್ರಾಮಗಳ 6 ಜನ ಪಟೇಲರು ಮತ್ತು 4 ಜನ ಶಾನಭೋಗರು ರಾಜಿನಾಮೆ ಕೊಟ್ಟಿರುವರೆಂದೂ ತಿಳಿದು ಬರುತ್ತದೆ. ಈ ದಿನ ಕೋಟೆಕಾರಿನಲ್ಲಿ ಈ ಬಗ್ಗೆ ಸಂಪೂರ್ಣ ಹರತಾಳ ನಡೆದಿದ್ದಿತೆಂದು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಶ್ರೀ ಕೃಷ್ಣಶೆಟ್ಟರು ತಿಳಿಸುತ್ತಾರೆ. (ನಭಾ)

ಆಟಂ ಶಕ್ತಿ

ಆಟಂ ಶಕ್ತಿ ಸಾರವುಳ್ಳ ಒಂದು ಚಿಕ್ಕ ಗುಳಿಗೆಯಿಂದ ಒಂದು ಮೋಟಾರು ಕಾರನ್ನು ಒಂದು ವರ್ಷದ ತನಕ ಓಡಿಸಬಹುದು. ಬೇಕಾದಂತೆ ಬಿಸಿಲು ಮಳೆಗಳನ್ನು ನಿರ್ಮಿಸಿಕೊಳ್ಳಬಹುದು. ಆ ಶಕ್ತಿ ಸರ್ವತ್ರವಾದಾಗ, ಎಣ್ಣೆ ಕೆಲ್ಲಿದ್ದಲು ಗಣಿಗಳು ಯಾರ ವಶವಿದ್ದರೂ ಯಾರೂ ಜಗಳ ಮಾಡಬಯಸರು.

ಆಟಂ ಶಕ್ತಿಯಿಂದ ಚಿನ್ನವನ್ನು ಹೇರಳ ಪ್ರಮಾಣದಲ್ಲಿ ತಯಾರಿಸಬಹುದೆಂದು ಲೋಹ ವಿಜ್ಞಾನಿಗಳು ತಿಳಿದಿರುವುದರಿಂದ ಬಂಗಾರವು ಸಾಮಾನ್ಯ ಲೋಹದಂತಾಗುವುದು. ಹೊಸ್ತಿಗಾಗಿ ಜನತೆಯು ಹೊರಾಡಬೇಕಿಲ್ಲ. (ಸ್ವ)

ನುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಇದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಸ್ಥಾನಿಕ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೨.೪-೦ ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಅಲ್ಪ ವ್ಯಯದ ಕಾಯಕಲ್ಪ

ಶಕ್ತಿಸುಧಾ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

At Opera

4 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಮುಂದಿನ ವಿನೋದ—

ಹೊಸ್ನಪ್ಪ ಭಾಗವತರ್ ಟಿ ಆರ್. ರಾಜಕುಮಾರಿ ವಸಂತ ಕೋಕಿಲಂ ಬಾಲಯ್ಯ ಕಾಳಿಂಗ ರತ್ನಂ

ಪಾತ್ರವಹಿಸಿರುವ

— ವಾಲ್ಮೀಕಿ —

(ತಮಿಳು)

ಹಸಿ ಬೆಟ್ಟದವರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ. ಮೈಸೂರು.

ಮೈಸೂರು ಸಿಟಿ ರೇಷನಿಂಗ್

No. R 1-60/45-46

1946 ನೆ ಎಪ್ರೆಲ್ ಮಾಹೆ 3 ನೆ ತಾರೀಖು ಬುಧವಾರ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್ ವರ್ತಕರ ಲೈಸೆನ್ಸ್ಡ್ ಡಿಪೋ ಮತ್ತು ಸಹಕಾರ ಸಂಘಗಳೂ ಸಹಾ "ಉಗಾದಿ ಹಬ್ಬದ" ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಎ. ರಜಾಕ್

ರೇಷನಿಂಗ್ ಆಫೀಸರ್

24-3-46 ಮೈಸೂರು ಸಿಟಿ

At Ranjit **From 31-3-46**

RAJPUTANI

Ranjit's 101 st Picture

ಜಯರಾಜ್ — ವೀಣಾ — ಬಿಕ್ಕಿಗುಪ್ತ — ಗುಲಾಂಮಹಮದ್

— ಪಾತ್ರವಹಿಸಿರುವ —

ರಾಜಪುತಾನಿ

Get Medical Diplomas

At home : — Ayurvedic Homeopathic, Unani, etc., Prospectus Free.

Old Indian Medical College Kotgarh, Simla

Edited, Printed and published by M. S. Krishna Rao, at the Satvavadi Press, Chamaraja Agrahar, Mysore